# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

## (ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿದೆ)

ಕ್ರ.ಸಂ :ಬೆವಿಕಂ.ಪ್ರವ್ಯ(ಆ ಮತ್ತು ಮಾ.ಸಂ.)/ಉಪ್ರವ್ಯ/ಬಿಸಿ-40/1354/2014-15/ 34-37

ಕಂಪನಿ ಕಾರ್ಯಾಲಯ,
ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ,
ಕ್ರೆಸೆಂಟ್ ಟವರ್ಸ್, ಕ್ರೆಸಂಟ್ ರೋಡ್,
ಮೊದಲನೇ ಮಹಡಿ, ಬೆಂಗಳೂರು
ದೂ : 22267181 (F) 22356756
E-Mail ID :dgmhrd.work@gmail.com

ದಿನಾಂಕ : 24.4.14.

ಇವರಿಗೆ :

ಅಧೀಕ್ಷಕ ಇಂಜೀನಿಯರು (ವಿ),
ಕಾರ್ಯ ಮತ್ತು ಪಾಲನೆ ವೃತ್ತ,
ಬೆ.ವಿ.ಕಂ. ಬೆಂಗಳೂರು ದಕ್ಷಿಣ ವೃತ್ತ/
ಕೋಲಾರ ವೃತ್ತ/ತುಮಕೂರು ವೃತ್ತ/ದಾವಣಗೆರೆ ವೃತ್ತ.

ಮಾನ್ಯರೆ,

ವಿಷಯ : MTTP-3 ರ ಅನ್ವಯ, ಮಾಪಕ ಓದುಗ/ಮೇಲ್ವಿಚಾರಕ/ಆಪರೇಟರ್/ಸಹಾಯಕ ಉಗ್ರಾಣ ಪಾಲಕ ಹುದ್ದೆಗೆ ಬಡ್ತಿ ಪಡೆಯಲು ಬೇಕಾಗಿರುವ ಮಾರ್ಗದಾಳು/ ಸ್ಟೇಷನ್ ಅಟೆಂಡೆಂಟ್ ಇವರಿಗೆ ಬಡ್ತಿ ಪೂರ್ವ ತರಬೇತಿಗೆ ನಿಯೋಜಿಸುವ ಬಗ್ಗೆ.

ಉಲ್ಲೇಖ: ಕ.ವಿ.ಪ್ರ.ನಿ.ನಿ. ಕಾರ್ಪೋರೇಟ್ ಕಚೇರಿ ಆದೇಶ ಸಂಖ್ಯೆ:ಕವಿಪ್ರನಿನಿ/ಬಿ.74/ 5901/2007-08 ದಿನಾಂಕ 26.11.2007.

*****

ದಿನಾಂಕ **12.05.2014** ರಿಂದ **16.06.2014** ರವರೆಗೆ ಬೆ.ವಿ.ಕಂ. ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ, ಬೆಂಗಳೂರು ಇಲ್ಲಿ **35**ನೇ ತಂಡದ **ಮಾರ್ಗದಾಳು/ಸ್ಟೇಷನ್ ಅಟೆಂಡೆಂಟ್** ಇವರಿಗೆ 30 ಕೆಲಸದ ದಿನಗಳ ಬಡ್ತಿ ಪೂರ್ವ ತರಬೇತಿಯನ್ನು ಹಮ್ಮಿಕೊಳ್ಳಲಾಗಿದೆ.

ಮೇಲ್ಕಂಡ ತರಬೇತಿಗೆ ನಿಮ್ಮ ವೃತ್ತದಿಂದ ನಿಯೋಜಿಸಬೇಕಾದ ಅರ್ಹ ಮಾರ್ಗದಾಳು/ಸ್ಟೇಷನ್ ಅಟೆಂಡೆಂಟ್ ಮತ್ತು ಇತರರ ಸಂಖ್ಯೆಯನ್ನು ಕೆಳಕಂಡಂತೆ ನಿಗದಿಪಡಿಸಲಾಗಿದೆ.

| ಕ್ರಮ ಸಂಖ್ಯೆ | ವೃತ್ತ | ನಿಯೋಜಿಸಬೇಕಾದ ಮಾರ್ಗದಾಳು ಸ್ಟೇಷನ್ ಅಟೆಂಡೆಂಟ್ ಸಂಖ್ಯೆ | ಷರಾ |
|---|---|---|---|
| 1 | ಬೆಂಗಳೂರು ದಕ್ಷಿಣ/ಉತ್ತರ/ಪೂರ್ವ/ಪಶ್ಚಿಮ/ ಗ್ರಾಮಾಂತರ ವೃತ್ತಗಳು | 15 | – |
| 2 | ತುಮಕೂರು ವೃತ್ತ | 10 | – |
| 3 | ಕೋಲಾರ ವೃತ್ತ | 10 | – |
| 4 | ದಾವಣಗೆರೆ ವೃತ್ತ | 10 | – |

ತರಬೇತಿಗೆ ನಿಯೋಜಿಸಲ್ಪಟ್ಟ ನೌಕರರು **ದಿನಾಂಕ 12.05.2014** ರಂದು ಪೂರ್ವಾಹ್ನ **9.30** ಗಂಟೆಗೆ ಸರಿಯಾಗಿ **ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ, 1ನೇ ಮಹಡಿ, ಕ್ರೆಸೆಂಟ್ ಟವರ್ಸ್, ಕ್ರೆಸೆಂಟ್ ರಸ್ತೆ, ರೇಸ್ ಕೋರ್ಸ್ ರಸ್ತೆ ಹತ್ತಿರ, ಬೆಂಗಳೂರು** ಇಲ್ಲಿಗೆ ವರದಿ ಮಾಡಿಕೊಳ್ಳಲು ಸೂಚಿಸಲಾಗಿದೆ. ತರಬೇತಿಗೆ ನಿಯೋಜಿಸಿದ ನೌಕರರು ನಿಗಮದ ನಿಯಮಾನುಸಾರ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆಗೆ ಅರ್ಹರಾಗಿರುತ್ತಾರೆ. ತರಬೇತಿ ಕೇಂದ್ರದಲ್ಲಿ ವಸತಿ ಮತ್ತು ಊಟದ ಸೌಲಭ್ಯಗಳು ಇಲ್ಲದ ಕಾರಣ ಶಿಬಿರಾರ್ಥಿಗಳು ತರಬೇತಿ ಅವದಿಯಲ್ಲಿ ಈ ವ್ಯವಸ್ಥೆಗಳನ್ನು ಸ್ವಂತವಾಗಿ ಮಾಡಿಕೊಳ್ಳತಕ್ಕದ್ದು.

ತಮ್ಮ ವೃತ್ತದಿಂದ ತರಬೇತಿಗೆ ನಿಯೋಜಿಸಲ್ಪಟ್ಟ ಶಿಬಿರಾರ್ಥಿಗಳ ಜ್ಞಾಪನ ಪತ್ರದ ಪ್ರತಿಯನ್ನು ಈ ಕಚೇರಿಗೆ ತುರ್ತಾಗಿ ಕಳುಹಿಸಲು ಕೋರಲಾಗಿದೆ.

ವಿ.ಸೂ. :

೧. ಆರ್ & ಪಿ ರೆಗ್ಯೂಲೇಷನ್‌ನ ಅನ್ವಯ ವೃತ್ತವಾರು ಜ್ಯೇಷ್ಠತೆ ಆಧಾರದ ಮೇಲೆ ನೌಕರರನ್ನು ತರಬೇತಿಗೆ ನಿಯೋಜಿಸುವುದು . ನೌಕರರ ಜ್ಯೇಷ್ಠತೆಯನ್ನು ನಿರ್ಧರಿಸುವಲ್ಲಿ ಈ ಕಚೇರಿಯ ಪಾತ್ರ ಮತ್ತು ಜವಬ್ದಾರಿ ಇರುವುದಿಲ್ಲ.

೨. ನಿಮ್ಮ ವೃತ್ತದಿಂದ ನಿಯೋಜಿಸಬೇಕಾದ ಅಭ್ಯರ್ಥಿಗಳ ಸಂಖ್ಯೆಯು ಮೇಲೆ ನಿಗದಿ ಪಡಿಸಿದ ಸಂಖ್ಯೆಯನ್ನು ಮೀರಬಾರದು.

೩. **12.05.2014** ನಂತರ ವರದಿಮಾಡಿಕೊಳ್ಳುವ ಅಭ್ಯರ್ಥಿಗಳನ್ನು ತರಬೇತಿಗೆ ಸೇರಿಸಿಕೊಳ್ಳಲಗುವುದಿಲ್ಲ.

೪. ಸಂಬಂದಿಸಿದ ಅಧಿಕಾರಿಗಳು ತರಬೇತಿಗೆ ನಿಯೋಜಿಸಲ್ಪಟ್ಟ ನೌಕರರನ್ನು ತರಬೇತಿಗೆ ಹಾಜರಾಗಲು ಅನುಕೂಲವಾಗುವಂತೆ ಸಕಾಲದಲ್ಲಿ ಕಾರ್ಯಮುಕ್ತ (ರಿಲೀವ್) ಮಾಡುವುದು.

೫. ನಿಯೋಜಿತ ನೌಕರರು ಎರಡು ಪಾಸ್ ಪೋರ್ಟ್ ಅಳತೆಯ ಭಾವ ಚಿತ್ರಗಳಲ್ಲಿ ಒಂದನ್ನು ಕಾರ್ಯಮುಕ್ತ ಪತ್ರದ (ರಿಲೀವ್ ರೀಪೂರ್ಟ್) ಬಲಭಾಗದಲ್ಲಿ ಅಂಟಿಸಿ ಕಚೇರಿ ಮುಖ್ಯಸ್ಥರ ಸಹಿ ಮತ್ತು ಮೊಹರುಗಳೊಂದಿಗೆ ತರಬೇಕು.

೬. ತರಬೇತಿಯ ಸಮಯದಲ್ಲಿ ನೌಕರರು ಯಾವುದೇ ತರಹದ ರಜೆಗಳನ್ನು ಉಪಯೋಗಿಸುವಂತಿಲ್ಲ.

ತಮ್ಮ ವಿಶ್ವಾಸಿ,

(ಎ.ಚಂದ್ರಶೇಖರಪ್ಪ)
ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾ.ಸಂ)
ನಿಗಮ ಕಾರ್ಯಾಲಯ
ಬೆ.ವಿ.ಕಂ. ಬೆಂಗಳೂರು.